
ಮನಸ್ಸಿನ ಮೂಲಕ ಪಡೆಯುವ ಬಾಹ್ಯವಸ್ತುಗಳ ತಿಳಿವಳಿಕೆಯೇ ನಮ್ಮಲ್ಲಿರುವ ಆತ್ಯಂತಿಕ ಸತ್ಯವಾದ ಜ್ಞಾನ ಎಂಬುದು ಡೆಕಾರ್ಟೆಯ ಅಭಿಪ್ರಾಯವಾಗಿತ್ತು. ನಾವು ಇಂದ್ರಿಯಗಳ ಮೂಲಕ ಪಡೆಯುವ ಜ್ಞಾನವು ದಿಟವಿಲ್ಲದಿರಬಹುದು; ಆದರೆ ನಮ್ಮ ವಿಚಾರನಿಷ್ಠ ಮನಸ್ಸಿನ ಮೂಲಕ ತಿಳಿದಿರುವುದು ನಿಶ್ಚಿತವಾಗಿ ದಿಟವಾಗಿರುತ್ತದೆ ಎಂಬುದು ಅವನ ಸ್ಪಷ್ಟ ನಿಲುವು. ಈ ತತ್ತ್ವವು ಒಳಗೊಂಡಿರುವ ವ್ಯಕ್ತಿನಿಷ್ಠ ದೃಷ್ಟಿಯನ್ನು ಕುರಿತು ಅನೇಕ ವಿವೇಚನೆಗಳು ನಡೆದಿವೆ. ಡೆಕಾರ್ಟೆಯ ತತ್ತ್ವವು ಪಾಶ್ಚಾತ್ಯ ತತ್ತ್ವಜ್ಞಾನದ ಮೇಲೆ ಮಾತ್ರವಲ್ಲದೆ, ೧೭ನೇ ಶತಮಾನದ ಸೈದ್ಧಾಂತಿಕ ವಿಜ್ಞಾನದ ಮೇಲೂ ತನ್ನ ಪ್ರಭಾವವನ್ನು ಬೀರಿದೆ. ಹೀಗಾಗಿ ಅದು ಆಧುನಿಕ ವಿಜ್ಞಾನದ ಅಡಿಪಾಯವೂ ಆಗಿದೆ ಎಂಬ ಹೊಸ ಆಯಾಮವನ್ನು ಲೇಖಕರು ಈ ಹೊತ್ತಗೆಯಲ್ಲಿ ಸುಸ್ಪಷ್ಟವಾಗಿ ಬಿಂಬಿಸಿದ್ದಾರೆ.

**(ಮೇಲಿನ ಎರಡು ಪುಸ್ತಕಗಳ ಪರಿಚಯವನ್ನು ನಮಗೆ ಮಾಡಿಕೊಟ್ಟಿರುವವರು ಡಾ.ಕೆ.ಚಿದಾನಂದ ಗೌಡ ಅವರು. ಇವರು ಕುವೆಂಪು ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಪತಿಗಳು.)**

## SHANKARACHARYA AND AN UNTOUCHABLE





**ಲೇಖಕರು: ಸ್ವಾಮಿ ರಂಗನಾಥಾನಂದ**
**ಪ್ರಕಾಶಕರು: ಅದ್ವೈತ ಆಶ್ರಮ, ಕೊಲ್ಕತಾ**
**ಪುಟ: ೪೦; ಬೆಲೆ: ರೂ.೧೫/-**

ಚಂಡಾಲನೊಬ್ಬನು ಮೂರು ಶ್ಲೋಕಗಳಲ್ಲಿ ಮಾಡುವ ಪ್ರಶ್ನೆಗೆ, ಶ್ರೀಶಂಕರಾಚಾರ್ಯರು ಮನನ ಮಾಡಿ ನೀಡಿದ ಐದು ಶ್ಲೋಕಗಳ ಉತ್ತರವು 'ಮನೀಷಾ ಪಂಚಕ' ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಇದರ ಬಗ್ಗೆ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ಹೈದರಾಬಾದಿನಲ್ಲಿ ನೀಡಿದ ಪ್ರವಚನದ ಪುಸ್ತಕರೂಪ ಇದು. ಮೊದಲನೆಯ ಭಾಗದಲ್ಲಿ 'ಮನೀಷಾ ಪಂಚಕ'ದ ವಿವರಣೆ ಇದೆ. ಎರಡನೆಯ ಭಾಗದಲ್ಲಿ ಶ್ರೀಶಂಕರರ ಜೀವನ ವೃತ್ತಾಂತ ಮತ್ತು ಮಹಿಮೆ ಇದೆ. ದೇವನಾಗರಿ ಲಿಪಿಯಲ್ಲಿ ಸಂಸ್ಕೃತ ಶ್ಲೋಕ, ಅದಕ್ಕೆ ಇಂಗ್ಲಿಷ್ ಲಿಪಿ ರೂಪಾಂತರ, ಭಾವಾರ್ಥ, ಪ್ರತಿವಾಕ್ಯದ ವಿಶ್ಲೇಷಣೆ – ಈ ಕ್ರಮವನ್ನು ಇಲ್ಲಿ ಅನುಸರಿಸಲಾಗಿದೆ. ಅವಶ್ಯವಿದ್ದ ಕಡೆ ಉಪನಿಷದ್ವಾಕ್ಯಗಳನ್ನು ಉದ್ಧರಿಸಲಾಗಿದೆ. ಇಲ್ಲಿ ಪ್ರತಿಪಾದಿಸಿರುವ ತತ್ತ್ವವನ್ನು ಆಚರಣೆಗೆ ತಂದಿದ್ದ ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದ, ನಾರಾಯಣಗುರು ಮೊದಲಾದ ಮಹನೀಯರ ಜೀವನದ ಘಟನೆಗಳನ್ನು ನಿದರ್ಶನಾರೂಪವಾಗಿ ನೀಡಲಾಗಿದೆ.

ಕಾಶೀಕ್ಷೇತ್ರದಲ್ಲಿ ತಮ್ಮ ಶಿಷ್ಯರೊಡಗೂಡಿ ಗಂಗೆಯಲ್ಲಿ ಸ್ನಾನಮಾಡಲು ಹೊರಟಿದ್ದ ಶ್ರೀಶಂಕರರು, ದಾರಿಯಲ್ಲಿ ಅಡ್ಡಬಂದ ಒಬ್ಬ ಚಂಡಾಲನನ್ನು ದೂರಸರಿಯಲು ಹೇಳಿದರು. ಆಗ ಅವನು, "ಗಂಗೆಯಲ್ಲಿ ಪ್ರತಿಬಿಂಬಿತವಾಗಿರುವ ಸೂರ್ಯನ ಬಿಂಬಕ್ಕೂ ಚಂಡಾಲನ ಮನೆಯ ಬಾವಿಯಲ್ಲಿ ಬಿಂಬಿತವಾಗಿರುವ ಸೂರ್ಯಬಿಂಬಕ್ಕೂ ವ್ಯತ್ಯಾಸವೇನಿದೆ? ಸಹಜಾನಂದದ ಅರಿವು ಸರ್ವತ್ರ ಒಂದೇ ಆಗಿರುವಾಗ ಈ ಭೇದ ಎಲ್ಲಿಯದು? ನೀನು ಈ ಅನ್ನಮಯ ಶರೀರವನ್ನು ದೂರಮಾಡಲು ಬಯಸುತ್ತಿರುವೆಯೋ ಅಥವಾ ಅದರಲ್ಲಿ ಅಡಗಿರುವ ಚೈತನ್ಯವನ್ನೋ?" ಎಂದು ಪ್ರಶ್ನಿಸುತ್ತಾನೆ. ಆಗ ಶ್ರೀಶಂಕರರು ಮಾಯೆಯ ಪ್ರಭಾವವನ್ನೂ, ಪ್ರಪಂಚದ ನಶ್ವರತೆಯನ್ನೂ, ಆತ್ಮದ ವ್ಯಾಪಕತೆಯನ್ನೂ ಯಥಾರ್ಥರೂಪದಲ್ಲಿ ಅರಿತು, ಆ ಚಂಡಾಲನನ್ನೇ ತಮ್ಮ ಗುರುವೆಂದು ಭಾವಿಸುತ್ತಾರೆ. ಈ ಸಂದರ್ಭದಲ್ಲಿ ಅವರ ಮುಖದಿಂದ ಮೂಡಿಬಂದ ಐದು ಶ್ಲೋಕಗಳಲ್ಲಿ ಸಮಸ್ತ ಅದ್ವೈತ ವೇದಾಂತದ ಸಾರವನ್ನೂ, ಮಾನವನು ತನ್ನ ಜೀವಿತಾವಧಿಯಲ್ಲಿ ಅನುಭವಿಸಬೇಕಾದ ಪರಮಜ್ಞಾನವನ್ನೂ ಶ್ರೀಶಂಕರರು ಸೆರೆಹಿಡಿದಿಟ್ಟಿದ್ದಾರೆ.

ಶ್ರೀಶಂಕರರ ಉತ್ತಮ ಭಾವಚಿತ್ರವಿರುವ ಮುಖಪುಟವುಳ್ಳ, ೪೦ ಪುಟಗಳ ಈ ಸಣ್ಣ ಪುಸ್ತಿಕೆ ಇಂಗ್ಲಿಷ್ ಭಾಷೆಯಲ್ಲಿದೆ. ಹೃದಯ ವೈಶಾಲ್ಯವನ್ನೂ, ಉತ್ತಮ ನಡೆನುಡಿಯನ್ನೂ ಬೆಳೆಸಿಕೊಳ್ಳುವ ಹಂಬಲವುಳ್ಳ, ಅಧ್ಯಾತ್ಮಜ್ಞಾನಪಿಪಾಸುಗಳಾದ, ಸ್ವಸ್ವರೂಪಾನುಭವವನ್ನು ಅನುಭವಿಸಿ ಧನ್ಯರಾಗಬೇಕೆಂಬ ಬಯಕೆಯುಳ್ಳವರು ಓದಲೇಬೇಕಾದ, ಹಾಗೂ ಅದರ ಮೇಲೆ, ಚಿಂತನ–ಮಂಥನ, ಮನನ–ನಿದಿಧ್ಯಾಸನಗಳನ್ನು ಮಾಡಬೇಕಾದ ಪುಸ್ತಿಕೆಯಿದು.

## INDIAN SAINTS AND MYSTICS




**ಲೇಖಕರು: ಪ್ರವ್ರಾಜಿಕಾ ಶುದ್ಧಾತ್ಮಪ್ರಾಣಾ**
**ಪ್ರಕಾಶಕರು: ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್**
**ಪುಟ: ೨೯೬; ಬೆಲೆ: ರೂ.೧೨೫/-**

ಭಾರತದಲ್ಲಿ ಜನ್ಮಪಡೆದ ನಾವು ಅತ್ಯಂತ ಪುಣ್ಯವಂತರು. ಭಕ್ತಶ್ರೇಷ್ಠರಾದ ನಾರದರನ್ನು ನಾರಾಯಣನು ಏನಾದರೂ ವರವನ್ನು ಬೇಡೆಂದು ಕೇಳಿದಾಗ, ಭಾರತದಲ್ಲಿ ಒಂದು ಕಲ್ಲಾಗಿ, ಎಲೆಯಾಗಿ, ಕೊನೆಗೆ ಒಂದು ಒಣಗಿದ ಹುಲ್ಲಾಗಿಯಾದರೂ ಜನ್ಮತಾಳಬೇಕೆಂಬ ಬಯಕೆಯನ್ನು ಅವರು ವ್ಯಕ್ತಪಡಿಸುತ್ತಾರೆ. ಭಾರತದಾದ್ಯಂತ ಎಲ್ಲೆಲ್ಲೂ ಭಕ್ತರೇ, ಸಾಧುಸಂತರೇ. ಅವರ ಸಾನ್ನಿಧ್ಯದ ತಂಪು, ಪವಿತ್ರತೆ, ಸುಗಂಧ ಇರದ ಎಡೆಯೇ ಭಾರತದಲ್ಲಿ ಇಲ್ಲ.

ಅಮೆರಿಕಾದ ದಕ್ಷಿಣ ಕ್ಯಾಲಿಫೋರ್ನಿಯಾ ವೇದಾಂತ ಸೊಸೈಟಿಗೆ ಸೇರಿದ ಶಾರದಾ ಕಾನ್ವೆಂಟಿನ ಸದಸ್ಯೆಯಾದ ಪ್ರವ್ರಾಜಿಕಾ ಶುದ್ಧಾತ್ಮಪ್ರಾಣಾ ಅವರು ಇಂತಹ ಭಕ್ತರ ಭಕ್ತಿಭಾವದಿಂದ ಪ್ರಭಾವಿತರಾಗಿ, ಭಾರತೀಯ ಸಂತರ ಜೀವನವನ್ನು ಭಾವನಾತ್ಮಕವಾಗಿ, ವಿಮರ್ಶಾತ್ಮಕವಾಗಿ, ಸಂಶೋಧನಾತ್ಮಕವಾಗಿ ಅಧ್ಯಯನ ಮಾಡಿದ್ದಾರೆ. ಪೂಜ್ಯ ಮಾತಾಜಿ ಅವರು Bulletin of the Ramakrishna Mission Institute of Culture ಎಂಬ ಪತ್ರಿಕೆಯಲ್ಲಿ, ೨೦೦೧–೨೦೦೬ ರವರೆಗೆ ಸಂತ ಭಕ್ತರನ್ನು ಕುರಿತ ಬರೆದ ಲೇಖನಗಳ ಸಮುಚ್ಚಯವೇ ಈ ಗ್ರಂಥ.


ಕ್ರಿ.ಶ. ೧೩ನೇ ಶತಮಾನದಿಂದ ೧೫ನೇ ಶತಮಾನದವರೆಗೆ (೧೯ನೇ ಶತಮಾನದ ಬ್ರಹ್ಮಚೈತನ್ಯರನ್ನು ಹೊರತುಪಡಿಸಿ) ಬಾಳಿ, ತಮ್ಮ ದಿವ್ಯಪ್ರಭೆಯನ್ನೂ, ಭಗವದಾನಂದಾಮೃತವನ್ನೂ ಲೋಕಕ್ಕೆ ಉಣಬಡಿಸಿ, ಅಮರರಾದ ಇಪ್ಪತ್ತೇಳು ಸಂತರ ಚರಿತ್ರೆ ಇಲ್ಲಿದೆ. ಈ ಎಲ್ಲ ಮಹಾನ್‌ಚೇತನಗಳೂ ಪಂಡರಾಪುರದ ವಿಠ್ಠಲನ ಭಕ್ತರು ಮತ್ತು ಮಹಾರಾಷ್ಟ್ರಕ್ಕೆ ಸೇರಿದವರು.

ಈ ಎಲ್ಲಾ ಭಕ್ತರ ಜೀವನಚರಿತ್ರೆಯನ್ನು ರಚಿಸಲು ಪೂಜ್ಯ ಮಾತಾಜಿ ಬಹಳ ಶ್ರಮವಹಿಸಿದ್ದಾರೆ. ಈ ಮಹಾನುಭಾವರ ಅನುಭವಾಮೃತಗಳಿಗೆ ಸಂವಾದಿಯಾದ ಕ್ರೈಸ್ತಸಂತರ ಅನುಭವಗಳನ್ನು ಉದಾಹರಿಸಿದ್ದಾರೆ; ಅಗತ್ಯವಿರುವೆಡೆ ಸಮರ್ಥನೆಗಾಗಿ

ಉಪನಿಷತ್ತುಗಳ (ವಿಶೇಷವಾಗಿ ಶ್ವೇತಾಶ್ವತರ ಉಪನಿಷತ್ತಿನ) ವಾಕ್ಯಗಳನ್ನೂ ಉದ್ಧರಿಸಿದ್ದಾರೆ; ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಹೇಳಿಕೆಗಳನ್ನೂ ಉದಾಹರಿಸಿದ್ದಾರೆ. ಅಷ್ಟೇ ಅಲ್ಲದೆ, ಮರಾಠಿ ಅಭಂಗಗಳ ಇಂಗ್ಲಿಷ್ ಪದ್ಯರೂಪಾಂತರವನ್ನೂ ನೀಡಿದ್ದಾರೆ.

ಹೀಗಾಗಿ ಕೇವಲ ಭಕ್ತರಿಗಷ್ಟೇ ಅಲ್ಲದೇ, ಬೌದ್ಧಿಕವಾಗಿ ವಿಮರ್ಶಿಸುವವರಿಗೂ, ತುಲನಾತ್ಮಕ ಅಧ್ಯಯನ ಮಾಡುವವರಿಗೂ, ಚಾರಿತ್ರಿಕವಾಗಿ ಸಂಶೋಧಿಸುವವರಿಗೂ ಈ ಗ್ರಂಥ ಉಪಕಾರಿಯಾಗಿದೆ. ಪ್ರತಿ ಲೇಖನದ ಕಡೆಯಲ್ಲಿ ನೀಡಿರುವ ಪರಾಮರ್ಶನಗ್ರಂಥಗಳ ಸೂಚಿ ವಿಶೇಷ ಅಧ್ಯಯನ ಮಾಡುವವರಿಗೆ ಅನುಕೂಲಕರವಾಗಿದೆ.

## THE MESSAGE OF VIVEKACHUDAMANI




**ಲೇಖಕರು: ಸ್ವಾಮಿ ರಂಗನಾಥಾನಂದ**
**ಪ್ರಕಾಶಕರು: ಅದ್ವೈತ ಆಶ್ರಮ, ಕೊಲ್ಕತಾ**
**ಪುಟ: ೬೨೪; ಬೆಲೆ: ರೂ.೧೨೫/–**

ಸಾಧಕನು ಅಧ್ಯಾತ್ಮದ ಹಾದಿಯಲ್ಲಿ ಮಾಡಬೇಕಾದ ಸಾಧನೆಗಳು, ಬೆಳೆಸಿಕೊಳ್ಳಬೇಕಾದ ಗುಣಧರ್ಮಗಳು, ತ್ಯಜಿಸಬೇಕಾದ ದುಷ್ಟಸ್ವಭಾವಗಳು, ಗುರು, ಆತ್ಮವಸ್ತು ಇದೇ ಮೊದಲಾದ ಅಧ್ಯಾತ್ಮಜ್ಞಾನಕ್ಕೆ ಅತ್ಯಗತ್ಯವಾದ ವಿಷಯಗಳು – ಇವೆಲ್ಲವನ್ನೂ ೫೮೦ ಶ್ಲೋಕಗಳಲ್ಲಿ ಶ್ರೀಶಂಕರಾಚಾರ್ಯರು ಅಡಕ ಮಾಡಿ, ಪ್ರತಿಪಾದಿಸಿರುವ ಕೃತಿಯೇ 'ವಿವೇಕಚೂಡಾಮಣಿ.'

ಸಾಧಕರೆಲ್ಲರಿಗೂ ಅಗತ್ಯವಾದ ಈ ಕೃತಿಯು ಅನೇಕ ವ್ಯಾಖ್ಯಾನಗಳನ್ನು ಕಂಡಿದೆ. ಆದರೆ ಸ್ವಾಮಿ ರಂಗನಾಥಾನಂದಜಿಯವರು ರಚಿಸಿರುವ ವ್ಯಾಖ್ಯಾನವು ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. 'ವಿವೇಕಚೂಡಾಮಣಿ'ಯಿಂದ ಆರಿಸಿದ ೩೯ ಶ್ಲೋಕಗಳಿಗೆ ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯಲ್ಲಿ ಇಲ್ಲಿ ವಿವರಣೆ ನೀಡಲಾಗಿದೆ. ಈ ಗ್ರಂಥವನ್ನು 'ಆಧ್ಯಾತ್ಮಿಕ ಜೀವನದ ಪ್ರಾರಂಭ', 'ಆತ್ಮಸಾಕ್ಷಾತ್ಕಾರದ ಮೆಟ್ಟಿಲುಗಳು', 'ಆತ್ಮಸ್ವರೂಪ ಮತ್ತು ಇತರೆ ವಿಷಯಗಳು' ಎಂಬುದಾಗಿ ಮೂರು ಪ್ರಧಾನ ವಿಭಾಗಗಳಾಗಿ ವಿಂಗಡಿಸಲಾಗಿದೆ. ಎಲ್ಲಾ ಶ್ಲೋಕಗಳೂ ದೇವನಾಗರಿ ಲಿಪಿಯಲ್ಲಿದ್ದು ಅವುಗಳಿಗೆ ಇಂಗ್ಲಿಷ್ ಲಿಪಿ ರೂಪಾಂತರವನ್ನು ಕೊಡಲಾಗಿದೆ. ಶ್ಲೋಕಗಳ ಅರ್ಥವನ್ನು ತಿಳಿಸಿದ ನಂತರ ಆಧುನಿಕ ಅಗತ್ಯತೆಗೆ ಅನುಗುಣವಾಗಿ ಅವುಗಳಿಗೆ ವೈಜ್ಞಾನಿಕ ವಿವರಣೆ ನೀಡಲಾಗಿದೆ. ಪ್ರತಿಯೊಂದು ಶ್ಲೋಕದ ವಿವರಣೆಯಲ್ಲೂ ಮಾನವತೆಯ ಶ್ರೇಯಸ್ಸಿಗಾಗಿನ ಸ್ವಾಮೀಜಿಯವರ ತುಡಿತವು ಪರಿಣಾಮಕಾರಿಯಾಗಿ ಪ್ರತಿಬಿಂಬಿತವಾಗಿದೆ.

ವೇದ, ಉಪನಿಷತ್ತು, ಭಗವದ್ಗೀತೆ, ಬೈಬಲ್ (ಹಳೆ ಒಡಂಬಡಿಕೆ, ನೂತನ ಒಡಂಬಡಿಕೆ), ಖುರಾನು ಮೊದಲಾದ ಸದ್ಗ್ರಂಥಗಳ ಉಕ್ತಿಗಳನ್ನು ಉದ್ಧರಿಸಿ, ಐನ್‌ಸ್ಟೈನ್, ಸಿಗ್ಮಂಡ್ ಫ್ರಾಯ್ಡ್, ಹಕ್ಸ್ಲೆ ಬರ್ಟ್ರಾಂಡ್ ರಸೆಲ್, ಖಾಸಿಂ ಮೊಹಮ್ಮದ್ ಜಲಾಲುದ್ದೀನ್, ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಮೊದಲಾದ ಮಹಾನ್ ಚಿಂತಕರ ವಿಚಾರಧಾರೆಗಳನ್ನೂ ತುಲನಾತ್ಮಕವಾಗಿ ಸಮನ್ವಯ ಮಾಡಿರುವುದು ಈ ಕೃತಿಯ ಮಹಾನ್ ವೈಶಿಷ್ಟ್ಯ. ಈ ರೀತಿ ಸರ್ವಧರ್ಮೀಯರಿಗೂ ಅನ್ವಯಿಸುವಂಥ ವ್ಯಾಖ್ಯಾನ ಬೇರೆಲ್ಲಿಯೂ ಕಾಣಸಿಗುವುದಿಲ್ಲ. ಆಧ್ಯಾತ್ಮಿಕ ಜ್ಞಾನದೊಡನೆ, ವಿಜ್ಞಾನ, ಸಮಾಜ ಶಾಸ್ತ್ರ, ಮಾನವಿಕ ಶಾಸ್ತ್ರ, ಮನೋವಿಜ್ಞಾನ, ಖಗೋಳ ವಿಜ್ಞಾನ ಇತ್ಯಾದಿ ಅನೇಕ ಶಾಸ್ತ್ರಗಳ ತೌಲನಿಕ ಅಧ್ಯಯನ ಒಂದೇ ಎಡೆಯಲ್ಲಿ ಸಿಗುವುದು ಈ ಕೃತಿಯ ವೈಶಿಷ್ಟ್ಯ. ಹೀಗೆ ಈ ಗ್ರಂಥ 'ಅಧ್ಯಾತ್ಮವಿದ್ಯಾವಿಶ್ವಕೋಶ' ದಂತಿದೆ. ಸ್ವಾಮೀಜಿಯವರ ಜ್ಞಾನಸಂಪನ್ನತೆಯ ಕೈಗನ್ನಡಿಯಾದ ಈ ಕೃತಿ ೧೯೮೦ರ ಅವಧಿಯಲ್ಲಿ ಅವರು ಹೈದರಾಬಾದಿನ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾಗ ನೀಡಿದ ಪ್ರವಚನಗಳ ಸಾರ.

**(ಮೇಲಿನ ಮೂರು ಪುಸ್ತಕಗಳ ಪರಿಚಯವನ್ನು ನಮಗೆ ಮಾಡಿಕೊಟ್ಟಿರುವವರು ಡಾ.ಕೆ.ಎಲ್. ಪ್ರಸನ್ನಾಕ್ಷಿ ಅವರು. ಸಂಸ್ಕೃತ ವಿದ್ವಾಂಸರಾದ ಇವರು ನಿವೃತ್ತ ಕಾಲೇಜು ಪ್ರಾಂಶುಪಾಲರು.)**

★

**ವಾರ್ತಾ ವಿಶ್ಲೇಷಣೆ**

## ಭಾರತ 'ಬಡ' ದೇಶವೇ?

ಈ ಪ್ರಶ್ನೆಗೆ 'ಇಲ್ಲ' ಎಂದೇ ಉತ್ತರಿಸಬೇಕಾಗುತ್ತದೆ. ಅದು ಹೇಗೆ ಎಂದು ಹುಬ್ಬೇರಿಸುತ್ತೀರೇನು? DNA ಎಂಬ ಇಂಗ್ಲಿಷ್ ಪತ್ರಿಕೆಯು ಬೆಂಗಳೂರು ನಗರದ ಮಹಾನ್ ಧನಿಕರ ಬಗ್ಗೆ ಪ್ರಕಟಿಸಿರುವ ಲೇಖನವನ್ನು ನೋಡಿ (೧.೫.೨೦೧೦). ಹಣವಂತರ ಬದಲಾಗುತ್ತಿರುವ ಜೀವನಶೈಲಿಯ ಬಗೆಗಿನ ಲೇಖನವದು. ಇದರ ಪ್ರಕಾರ, ಅಮೆರಿಕದ ಧನವಂತರೂ ನಾಚುವಷ್ಟು ದುಂದುವೆಚ್ಚವನ್ನು ನಮ್ಮ 'ಬಡ' ಭಾರತದ ಸ್ಥಿತಿವಂತರು ಮಾಡುತ್ತಿದ್ದಾರೆ. ಈಗಾಗಲೇ ಲಕ್ಷಾಂತರ ರೂಪಾಯಿಗಳಷ್ಟು ಬೆಲೆಬಾಳುವ ಐದಕ್ಕೂ ಹೆಚ್ಚು ರೋಲ್ಸ್‌ರಾಯ್ಸ್ ಕಾರುಗಳು ಬೆಂಗಳೂರಿಗೆ ಬಂದಿವೆ. ಹಲವಾರು ಧನಿಕರು ತಮ್ಮದೇ ಆದ ವಿಹಾರನೌಕೆ, ಜೆಟ್ ವಿಮಾನಗಳನ್ನು ಕೊಂಡುಕೊಳ್ಳಲು ಆಸಕ್ತಿ ತೋರಿಸುತ್ತಿದ್ದಾರೆ. ಅಂತಹ ಒಂದು ವಿಹಾರನೌಕೆಯ ಬೆಲೆ ಹಲವು ಕೋಟಿ ರೂಪಾಯಿಗಳಷ್ಟು, ಅದನ್ನು ಮಾರಾಟಮಾಡುವ ಕಂಪನಿಯ ಮುಖ್ಯಸ್ಥ ಹೀಗೆ ಹೇಳುತ್ತಾರೆ: "ನಾವೀಗಾಗಲೇ ಎರಡು ವಿಹಾರನೌಕೆಗಳನ್ನು ಮಾರಾಟಮಾಡಿದ್ದೇವೆ. ಇನ್ನೊಬ್ಬರು ಅದಕ್ಕಿಂತಲೂ ಬೆಲೆಬಾಳುವ ವೈಭೋಗದ ನೌಕೆಯನ್ನು ಬಯಸಿದ್ದಾರೆ. ಗಣಿ ಮಾಲಿಕರು, ಕಟ್ಟಡ ನಿರ್ಮಾಣಕಾರರು ತಮ್ಮದೇ ಆದ ಜೆಟ್ ವಿಮಾನ ಬೇಕೆಂದು ಬಯಸಿದ್ದಾರೆ." ಹಿಂದೆ ದೆಹಲಿ ಮತ್ತು ಮುಂಬಯಿ ನಗರಗಳಲ್ಲಿ ಮಾತ್ರ ಇಂತಹ ವೈಭೋಗದ ಆಕಾಂಕ್ಷೆ ಕಾಣಬರುತ್ತಿತ್ತಂತೆ. ಈಗ ಇದು ಬೆಂಗಳೂರಿಗೂ ವಿಸ್ತರಿಸಿದೆ. ಹೆಚ್ಚು ಹೆಚ್ಚು ಜನ ಬೇಗ ಬೇಗ ಅಧಿಕಾಧಿಕವಾಗಿ ಹಣ ಗಳಿಸುತ್ತಿದ್ದಾರೆ. ಅತಿ ತೀವ್ರವಾಗಿ ಅಭಿವೃದ್ಧಿಯಾಗುತ್ತಿರುವ ವ್ಯಾಪಾರ, ವಹಿವಾಟುಗಳ ಪರಿಣಾಮ ಇದು. ಕೈತುಂಬ ಹಣ ಇರುವಾಗ ಧನಿಕರು ಏನು ತಾನೇ ಮಾಡುತ್ತಾರೆ? ಅದಕ್ಕೇ ವೈಭೋಗದ ಬೆಂಜ್ ಕಾರುಗಳು, ಹೆಲಿಕಾಪ್ಟರ್‌ಗಳು ಹೆಚ್ಚು ಹೆಚ್ಚು ಮಾರಾಟವಾಗುತ್ತಿವೆ, ಹಿಂದೆಂದೂ ಕಾಣದ ರೀತಿಯಲ್ಲಿ ಬೆಂಗಳೂರು ವೈಭೋಗಯುಕ್ತವಾಗಿ ಮಿರಿಮಿಂಚುತ್ತಿದೆ. ವರ್ಷಕ್ಕೆ ಕೋಟಿಗಟ್ಟಲೆ ಆದಾಯವಿರುವ ಈ ಸೂಪರ್ ಶ್ರೀಮಂತರು ಇರುವಾಗ, ನಮ್ಮದು ಬಡತನದ ನಾಡು ಹೇಗಾದೀತು?

ಹಣವನ್ನು ಬಾಚಿಕೊಳ್ಳುತ್ತಿರುವ ಆ ಅದೃಷ್ಟಶಾಲಿಗಳು, ತಮ್ಮ ಅಂತಸ್ತನ್ನು ಕಾಪಾಡಿಕೊಳ್ಳಲು ಉನ್ನತದರ್ಜೆಯ ಜೀವನಶೈಲಿಯನ್ನು ಅಳವಡಿಸಿಕೊಳ್ಳುತ್ತಿದ್ದಾರಂತೆ. ಇದು ಒಳ್ಳೆಯದೇ. ಆದರೆ ಪಕ್ಕದ ಹಳ್ಳಿಯಲ್ಲಿ, ಬಡತನದ ಬೇಗೆಯಲ್ಲಿ ನರಳುತ್ತಿರುವ ಸಣ್ಣ ರೈತರು ಮತ್ತು ಕೂಲಿಕಾರ್ಮಿಕರನ್ನು ಯಾರು ತಾನೇ ಕೇಳುತ್ತಾರೆ? ನಮ್ಮ ದೇಶದ ಅರ್ಧ ಜನಸಂಖ್ಯೆಗಿಂತಲೂ ಹೆಚ್ಚಾಗಿರುವ ಈ ನತದೃಷ್ಟರ ಬದುಕು ಎಂದು ತಾನೇ ಹಸನಾದೀತು? ಇದು ಭಾರತೀಯರಾದ ನಾವೆಲ್ಲರೂ ಯೋಚಿಸಬೇಕಾದ ವಿಷಯವಲ್ಲವೇ? ★

ದಿವ್ಯಸ್ಮೃತಿಪ್ರಭ

# ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರ ಸವಿನೆನಪುಗಳು

## ಕಾರ್ಯನಿರ್ವಾಹಕರಾಗಿ ಸ್ವಾಮಿ ಭೂತೇಶಾನಂದಜಿ



**ಬ್ರಹ್ಮಚಾರಿ ಜ್ಞಾನಾತ್ಮಚೈತನ್ಯ**

*(ಜೂನ್ ೨೦೧೦ ರ ಸಂಚಿಕೆಯಿಂದ)*

**ಒಂದು** ಪ್ರಶ್ನೆಗೆ ಉತ್ತರಿಸುತ್ತಾ ಸ್ವಾಮಿ ಭೂತೇಶಾನಂದರು ತಾವು ಚಿರಾಪುಂಜಿಯಲ್ಲಿ ನೆಲೆಸಿದ ದಿನಗಳ ಬಗ್ಗೆ ಈ ರೀತಿ ಹೇಳಿದರು: "೧೯೩೬ ರಲ್ಲಿ ಮಠದ ಟ್ರಸ್ಟಿಗಳು ನನ್ನನ್ನು ಚಿರಾಪುಂಜಿ ಆಶ್ರಮದ ಅಧ್ಯಕ್ಷನನ್ನಾಗಿ ನೇಮಿಸಿದ್ದರು. ಬೇಲೂರುಮಠದ ಆದೇಶದ ಮೇರೆಗೆ ಅಲ್ಲಿ ನಡೆಸುತ್ತಿದ್ದ ಶಾಲೆಯ ಕಡೆಗೆ ಮೊದಲು ನಾನು ಗಮನಹರಿಸಿದೆ. ಶಾಲೆಯ ಸ್ಥಿತಿ ಶೋಚನೀಯವಾಗಿತ್ತು. ಕಳೆದ ಒಂದು ವರುಷದಿಂದ ಉಪಾಧ್ಯಾಯರಿಗೆ ವೇತನ ನೀಡಿರಲಿಲ್ಲ ಹಾಗೂ ಮುಖ್ಯೋಪಾಧ್ಯಾಯರಿಂದ ತಿಳಿದುಬಂದ ಪ್ರಕಾರ, ಅಂಗಡಿಯವರಿಂದ ಸಾಲವನ್ನು ತೆಗೆದುಕೊಂಡು ಶಾಲೆಯನ್ನು ನಡೆಸಲಾಗುತ್ತಿತ್ತು.

"ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವವನ್ನು ಆಚರಿಸಿ, ಉಳಿದ ಹಣದಿಂದ ಶಿಕ್ಷಕರ ವೇತನವನ್ನು ನೀಡಲಾಯಿತು. ಇನ್ನೂ ಸ್ವಲ್ಪ ಹಣ ಉಳಿದಿತ್ತು. ಅದರಿಂದ ಮುಖ್ಯೋಪಾಧ್ಯಾಯರ ಸಂಬಳ ಅಥವಾ ಅಂಗಡಿಯ ಸಾಲ – ಇವುಗಳಲ್ಲಿ ಒಂದನ್ನು ಮಾತ್ರ ನೀಡಲು ಸಾಧ್ಯ ಎಂದು ಮುಖ್ಯೋಪಾಧ್ಯಾಯರಿಗೆ ತಿಳಿಸಿದೆ. ಆದರೆ ಈಗಲೇ ಅವೆರಡನ್ನೂ ತೀರಿಸಬೇಕೆಂದು ಅವರು ಪಟ್ಟು ಹಿಡಿದರು. ಅದು ಸಾಧ್ಯವಾಗುವುದಿಲ್ಲ ಎಂದಾಗ ರಾಜೀನಾಮೆ ಕೊಟ್ಟು ಹೊರಟುಹೋದರು. ಈಗ ಹೊಸದೊಂದು ಸಮಸ್ಯೆ ಹುಟ್ಟಿಕೊಂಡಿತು. ಹೊಸ ಮುಖ್ಯೋಪಾಧ್ಯಾಯರನ್ನು ಎಲ್ಲಿಂದ ಹುಡುಕುವುದು? ಅಂದಿನ ಕಾಲದಲ್ಲಿ ಅಷ್ಟು ಸುಲಭವಾಗಿ ವಿದ್ಯಾರ್ಹತೆ ಇರುವವರು ಸಿಕ್ಕುತ್ತಿರಲಿಲ್ಲ. ಬಹಳ ಪ್ರಯತ್ನಪಟ್ಟ ಮೇಲೆ ಒಬ್ಬರು ಸಿಕ್ಕಿದರು. "ಐವತ್ತು ರೂಪಾಯಿಗಳ ಸಂಬಳ ಕೊಟ್ಟರೆ ಬರುವೆ" ಎಂಬ ಷರತ್ತನ್ನು ಅವರು ಹಾಕಿದರು. ಬೇರೆ ದಾರಿ ಇಲ್ಲದೆ ನಾನು ಅದಕ್ಕೆ ಒಪ್ಪಬೇಕಾಯಿತು.

"ಹೊಸದಾಗಿ ಸೇರಿದ ಆ ಮುಖ್ಯೋಪಾಧ್ಯಾಯರು ಕೂಡ ಸ್ವಲ್ಪ ದಿನಗಳಲ್ಲಿಯೇ ಕೆಲಸ ಬಿಟ್ಟು ಹೊರಟುಹೋದರು. ಆದರೆ ಅವರೇ, ಎಂ.ಎ. ಓದಿಕೊಂಡ ಬೇರೊಬ್ಬ ಯುವಕನನ್ನು ತಮ್ಮ ಸ್ಥಾನಕ್ಕೆ ಬಿಟ್ಟುಹೋದರು. ಆ ಯುವಕ ಸೇವಾಮನೋಭಾವವುಳ್ಳ ವ್ಯಕ್ತಿಯಾಗಿದ್ದ. 'ನಿನಗೆ ಐವತ್ತು ರೂಪಾಯಿಗಳಿಗಿಂತ ಹೆಚ್ಚು ಸಂಬಳ ಕೊಡಬಲ್ಲೆ' ಎಂದಾಗ ಅವನು ಅದಕ್ಕೆ ಒಪ್ಪಲಿಲ್ಲ. 'ಇದು ತ್ಯಾಗಿಗಳು, ಸಂನ್ಯಾಸಿಗಳು ನಡೆಸುವಂಥ ಶಾಲೆ. ಶಾಲೆ ನಡೆಸಲು ನಿಮಗೆಲ್ಲಿಂದ ತಾನೇ ಹಣ ಒದಗುವುದು?' ಎಂದ.

**ಪ್ರಶ್ನೆ:** ಮಹಾರಾಜ್, ಅಷ್ಟು ಕಡಿಮೆ ಸೌಲಭ್ಯಗಳಿದ್ದಾಗ ಆಶ್ರಮವನ್ನು ಹೇಗೆ ನಡೆಸುತ್ತಿದ್ದಿರಿ?

**ಸ್ವಾಮೀಜಿ:** ಮನೆಮನೆಗೆ ಹೋಗಿ ಚಂದಾ ಎತ್ತುತ್ತಿದ್ದೆ. ಎರಡಾಣೆ, ನಾಲ್ಕಾಣೆ ಅಥವಾ ಎಂಟಾಣೆ ಕೊಡುತ್ತಿದ್ದರು. ದೊಡ್ಡ ಭಕ್ತರು ಒಂದೆರಡು ರೂಪಾಯಿಗಳನ್ನೂ ದಾನ ಮಾಡುತ್ತಿದ್ದರು. ಜೊತೆಜೊತೆಗೆ ಪ್ರವಚನಗಳನ್ನೂ ಆರಂಭಿಸಿದೆ. ಕ್ರಮೇಣ ಜನಗಳ ಪರಿಚಯ ಆಯಿತು. ವಾರಕೊಮ್ಮೆ ಶಿಲ್ಲಾಂಗಿಗೂ ಹೋಗಿ ಪ್ರವಚನಗಳನ್ನು ನೀಡುತ್ತಿದ್ದೆ. ಚಿರಾಪುಂಜಿಯಿಂದ ಶಿಲ್ಲಾಂಗಿಗೆ ಇದ್ದಿಲನ್ನು ಸಾಗಿಸುವ ಲಾರಿಗಳಲ್ಲಿ ನಮ್ಮ ಸ್ವಾಮಿಗಳು ಸಂಚರಿಸುತ್ತಿದ್ದರು. ಶಿಲ್ಲಾಂಗಿನಲ್ಲಿ ಚಂದಾ ಕೊಡುವುದಾಗಿ ಕರೆದಿದ್ದರೆ, ಅವರ ಸ್ಥಳಕ್ಕೆ, ಸೈಕಲಿನಲ್ಲಿ ಕೂಡ ಹೋಗುತ್ತಿದ್ದರು.

ಶಿಲ್ಲಾಂಗಿನಲ್ಲಿ ವಾರಕ್ಕೆ ಬೇಕಾಗುವಷ್ಟು ಅಕ್ಕಿಯನ್ನು ಕೊಂಡುಕೊಂಡು, ವಾಪಸು ಬರುವಾಗ ತರುತ್ತಿದ್ದೆ. ಚಿರಾಪುಂಜಿಯ ಅಂಗಡಿ ಮಾಲಿಕರೊಬ್ಬರು ಬೇಳೆಯನ್ನು ದಾನ ಮಾಡುತ್ತಿದ್ದರು. ಆಶ್ರಮದ ತೋಟದಲ್ಲಿ ಸೊಪ್ಪಿಗೇನೂ ಕೊರತೆ ಇರಲಿಲ್ಲ. ಅಕ್ಕಿ, ಬೇಳೆ ಹಾಗೂ ಸೊಪ್ಪು – ಇವೆಲ್ಲವನ್ನೂ ಒಂದೇ ಪಾತ್ರೆಯಲ್ಲಿ ಬೇಯಿಸಿ ಊಟ ಮಾಡುತ್ತಿದ್ದೆ. ಉಪ್ಪನ್ನು ಕೂಡ ಖರೀದಿಸುತ್ತಿರಲಿಲ್ಲ. ಅಡುಗೆಗೆ ಬೇಕಾದ ಇದ್ದಿಲಿಗೆ ಬೇಕಾದ ಎಂಟಾಣೆ ಹೊರತುಪಡಿಸಿ, ಬೇರೆ ಯಾವುದಕ್ಕೂ ಆಶ್ರಮದ ಹಣವನ್ನು ಖರ್ಚು ಮಾಡುತ್ತಿರಲಿಲ್ಲ. ಅಲ್ಪಸ್ವಲ್ಪ ಬಟ್ಟೆಗಳಿದ್ದುದರಿಂದ, ಯಾವಾಗಲೂ ಒದ್ದೆಯಾದದ್ದನ್ನೇ ಹಾಕಿಕೊಂಡಂತೆ ಇರುತ್ತಿತ್ತು.

ನಮ್ಮ ಶಾಲೆಯ ಒಂದು ಕೊಠಡಿಯನ್ನೇ ನನ್ನ ನಿವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದೆ. ಅದರ ಮಾಳಿಗೆ ಸೋರುತ್ತಿತ್ತು. ಹೋಲಿಸಿ ನೋಡಿದರೆ ಕೊಠಡಿಯ ಹೊರಗಡೆಗಿಂತ ಒಳಗಡೆಯೇ ಹೆಚ್ಚು ಸಮಯ ಮಳೆಯ ಅನುಭವವಾಗುತ್ತಿತ್ತು. ಮಳೆ ಅಂದರೆ ನೆನಪಾಯಿತು. ಒಮ್ಮೆ ರಾತ್ರಿ ತೊಟ್ಟಿಕ್ಕುತ್ತಿದ್ದ ಮಾಳಿಗೆಯ ನೀರಿನಿಂದ ತಪ್ಪಿಸಿಕೊಳ್ಳಲು ಮಂಚವನ್ನು ಈ ಮೂಲೆಯಿಂದ ಆ ಮೂಲೆಗೆ ಹಾಗೂ ಆ ಮೂಲೆಯಿಂದ ಈ ಮೂಲೆಗೆ ಸರಿಸುತ್ತಾ, ಕೊನೆಗೆ ಒಂದು ತೆಳುವಾದ ಹೊದಿಕೆ ಹೊದ್ದು ಮಲಗಿದೆ.